ಶ್ರೀ ಎಚ್. ಸಿದ್ಧವೀರಪ್ಪ.—ಅಷ್ಟೆರ್ಲಾ ವಿವರ ನನ್ನಲ್ಲಿ ಇಲ್ಲ. ಈಗಿರತಕ್ಕಂತೆ ಅಲ್ಲಿ ಪ್ರಾರಂಭ ಮಾಡಿದ್ದಾರೆ. ಸ್ವಾವಲಂಬನೆಯಾಗುವುದಕ್ಕೆ ಕೆಲವು ದಿವಸಗಳು ಬೇಕಾಗುತ್ತದೆ. ಮೊದಲು ನಾವು ಸಿಮ್ಲಾ ಮುಂತಾದ ಕಡೆಗಳಿಂದ ಬೀಜಗಳನ್ನು ತರಿಸುತ್ತಿದ್ದೆವು. ಈಗ ಅದಷ್ಟು ನಮ್ಮ ದೇಶದಲ್ಲಿಯೇ ಇದರ ಬೆಳವಣಿಗೆ ಮಾಡಬೇಕೆಂದು ಸರ್ಕಾರದ ಉದ್ದೇಶವಾಗಿದೆ. ಈ ಕೇಂದ್ರದಲ್ಲಿ ಇದರ ಕಾರ್ಯವನ್ನು ತ್ವರಿತವಾಗಿ ಮಾಡುತ್ತಿದ್ದಾರೆ. ಹಾಸನ ಜಿಲ್ಲೆ ಎಲ್ಲಕ್ಕಿಂತಲೂ ಹೆಚ್ಚು ಆಲೂಗಡ್ಡೆ ಬೆಳೆಯುತ್ತಿರುವ ಜಿಲ್ಲೆ.

ಶ್ರೀ ಎಂ. ನಂಜೇಗೌಡ.—ಈ ಸಾರಿ ಅಲ್ಲಿ ಆಲುಗಡ್ಡೆಯನ್ನು ಉತ್ತಮವಾಗಿ ಬೆಳೆದಿದ್ದರೂ ಜನರಿಗೆ ಅದನ್ನು ಕೊಂಡುಕೊಳ್ಳುವುದಕ್ಕೆ ಆನುಮಾನ ಇದೆ. ಅದನ್ನು ಹೆಚ್ಚಿಗೆ ಜನಪ್ರಿಯಗೊಳಿಸ ಬೇಕಾದರೆ ರೈತರಿಗೆ ರಿಯಾಯಿತಿ ದರದಲ್ಲಿ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಅದನ್ನು ವಿಚಾರ ಮಾಡೋಣ.

ಶ್ರೀ ಕೆ. ಎಚ್. ಹನುಮೇಗೌಡ.—ಸೋಮನಹಳ್ಳಿ ಕೇಂದ್ರದಲ್ಲಿ ಉತ್ಪಾದನೆಯಾಗತಕ್ಕಂತಹ ಬೀಜದ ಬಗ್ಗೆ ಅನೇಕ ರೈತರು ಸಂಶಯ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇಲ್ಲಿ ಇರತಕ್ಕಂತಹ ಅಧಿಕಾರಿ ಯಾರು ಇದ್ದಾರೆ, ಅವರ ಅನುಭವ, ಅರ್ಹತೆ ಮತ್ತು ಈ ಕ್ಷೇತ್ರದಲ್ಲಿ ಕೊಟ್ಟಿರತಕ್ಕಂತಹ ಕಾಣಿಕೆ ಏನೆಂದು ಹೇಳುತ್ತೀರಾ ?

ಶ್ರೀ ಎಚ್. ಸಿದ್ಧವೀರಪ್ಪ.—ಒಬ್ಬ ಅಧಿಕಾರಿಯ ಮೇಲೆ ಒಂದು ಸಂಶೋಧನಾ ಕೇಂದ್ರ ಇರುವುದಿಲ್ಲ. ಆ ಮನುಷ್ಯ ನಾರಾಯಣ್ ಅದರೆ, ಅವನನ್ನು ತೆಗೆದುಹಾಕಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಲಕ್ಷಾಂತರ ರೂಪಾಯಿ ಖರ್ಚು ಮಾಡತಕ್ಕಂತಹ ಈ ಇರಾಖೆಯಲ್ಲಿ ತಕ್ಕ ಅರ್ಹತೆ ಇರುವ ಮತ್ತು ಅನುಭವ ಇರುವ ಅಧಿಕಾರಿ ಇರಬೇಕು. ಇಲ್ಲ/ಇರ ತಕ್ಕಂತಹ ಅಧಿಕಾರಿ ಕಳೆದ 10 ವರ್ಷದಿಂದ ಇದ್ದಾನೆ. ಅತನನ್ನು ಬಿಟ್ಟು ಬೇರೆಯವರು ಯಾರೂ ನಿಮಗೆ ಸಿಗಲಿಲ್ಲವೇ ? ಅತನ ಅರ್ಹತೆ ಮತ್ತು ಅತ ದೇಶಕ್ಕೆ ಕೊಟ್ಟಿರುವ ಕಾಣಿಕೆಯಾದರೂ ಏನು ?

ಶ್ರೀ ಎಚ್. ಸಿದ್ಧವೀರಪ್ಪ.—ಇಲ್ಲಿರತಕ್ಕಂತಹ ಪ್ರಶ್ನೆಯಲ್ಲಿ ಆ ಪ್ರಶ್ನೆಗಳು ಉದ್ಭವ ವಾಗುವುದಿಲ್ಲ. ಅವನು ಇನ್‌ಎಫಿಶಿಯೆಂಟ್ ಆದುದರಿಂದ ಕೆಟ್ಟು ಹೋಗಿದೆಯೇ ಎಂದು ಅವರು ಕೇಳಿಲ್ಲ. ಆದರೂ ಸರ್ಕಾರದ ಗಮನಕ್ಕೆ ಅದನ್ನು ತಂದಿದ್ದಾರೆ, ಅದನ್ನು ವಿಚಾರ ಮಾಡೋಣ.

Iggalur Pick-up

535. Sri T. V. KRISHNAPPA (Channapatna).—

Will the Minister of State for Major Irrigation be pleased to state :—

(*a*) whether the Estimate for Iggalur Pickup is ready ; if not, when it will be finalised ;

(*b*) when the Government proposes to take up the construction of this pick-up ?

Sri H. N. NANJE GOWDA (Minister of State for Major Irrigation).—

(*a*) It is ready.

(*b*) After the same is cleared by Government of India.

ಶ್ರೀ ಟಿ. ವಿ. ಕೃಷ್ಣಪ್ಪ.—ಈ ಪಿಕ್‌ಪ್ ಮಾಡುವುದಕ್ಕೆ ಎಷ್ಟು ಖರ್ಚಾಗಿದೆ ಮತ್ತು ಇದನ್ನು ಮಾಡಿದರೆ ಎಷ್ಟು ಎಕರೆಗೆ ನೀರಾವರಿ ಸೌಲಭ್ಯ ಒದಗುತ್ತದೆ ? ಮತ್ತು ಈಚೆಗೆ ಇದರ ಬಗ್ಗೆ ಕೇಂದ್ರಕ್ಕೆ ಒತ್ತಾಯ ಮಾಡಿ ಹೇಳಿದ್ದೀರಾ ?

† ಶ್ರೀ ಎಚ್. ಎನ್. ನಂಜೇ ಗೌಡ.—ಇದಕ್ಕೆ 132 ಲಕ್ಷ ರೂಪಾಯಿ ಆಗುತ್ತದೆಂದು ಅಂದಾಜು ಮಾಡಿದ್ದಾರೆ. ಇದರಿಂದ 10,700 ಎಕರೆ ಜಮೀನಿಗೆ ನೀರಿನ ಸೌಲಭ್ಯ ಸಿಗುತ್ತದೆ. ಕೇಂದ್ರಕ್ಕೆ ನಾವು ಜೂನ್ 21ರಲ್ಲಿ ಬರೆದಿದ್ದೇವೆ. ಆ ಮೇಲೆ ಅವರು ಅಕ್ಟೋಬರ್‌ನಲ್ಲಿ ಕೆಲವು ಕಾಮೆಂಟ್ಸ್ ಕೇಳಿದ್ದರು. ಅದಕ್ಕೆ ಪುನಃ ಫೆಬ್ರುವರಿಯಲ್ಲಿ ಉತ್ತರ ಕಳುಹಿಸಿಕೊಟ್ಟಿದ್ದೇವೆ, ಇನ್ನೂ ಕ್ಲಿಯರೆನ್ಸ್ ಬಂದಿಲ್ಲ. ಇದಕ್ಕಾಗಿ ಕೇಂದ್ರವನ್ನು ಒತ್ತಾಯಮಾಡುತ್ತಿದ್ದೇವೆ.

ಶ್ರೀ ಎ. ಎಂ. ಬೆಳ್ಳಿಯಪ್ಪ.—ಈ ಯೋಜನೆಯಿಂದ ಮಳವಳ್ಳಿ ಮತ್ತು ಮದ್ದೂರು ತಾಲ್ಲೂಕಿನ ಕೆಲವು ಪ್ರದೇಶಗಳಿಗೆ ನೀರಾವರಿ ಸೌಕರ್ಯ ಒದಗಿಸುವುದಕ್ಕೆ ಏರ್ಪಾಡು ಮಾಡಲಾಗುತ್ತದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ಇದರಲ್ಲಿ ಹೋಬಳಿವಾರ್ ಮಾಹಿತಿ ಇಲ್ಲ. ಅದಕ್ಕೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು.

Tanks in Hassan Constituency

575. K. H. HANUME GOWDA (Hassan).—

Will the Minister for Public Works and Electricity be pleased to state :—

(*a*) the number of tanks in Hassan constituency having more than 10 acres of achkat ;

(*b*) the number of tanks repaired so far ;

(*c*) the number of tanks in respect of which estimates for repairs have been prepared ;

(*d*) the number of years within which the Government have programmed to repair the unrepaired tanks ?

Sri H. M. CHANNABASAPPA (Minister for Public Works and Electricity).—

(*a*) The number of tanks in Hassan Assembly Constituency having more than 10 acres of achkat is 4304 ;

(*b*) 116 tanks have been repaired from 1967-68 to 1971-72 ;

(*c*) Estimates for repairing 32 tanks have been prepared this year :

(*d*) The Department prepares the programme of repairs every year by taking decision depending upon the grant sanctioned. Naturally, as repair works crop up often it is not possible to say precisely that they will be completed within specified years.

ತಾವು (ಎ) ಪ್ರಶ್ನೆಗೆ ಉತ್ತರವಾಗಿ 4304ರ ಬದಲು 304 ಎಂದು ತಿದ್ದಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಹಾಸನ ತಾಲ್ಲೂಕು ಆಗಾಗ್ಗೆ ಬರಗಾಲಕ್ಕೆ ತುತ್ತಾಗ ತಕ್ಕಂತಹ ಪ್ರದೇಶ. ಈ ಭಾಗದ ಜನರು ಶಾಶ್ವತವಾಗಿ ಕ್ಷಾಮದ ದವಡೆಗೆ ಸಿಲುಕತಕ್ಕ ಜನರು. ಪರಿಸ್ಥಿತಿ ಹೀಗಿದ್ದರೂ ಕೂಡ ಈ ಕೆರೆಗಳ ರಿಪೇರಿಗೆ ಸೂಕ್ತವಾದ ಕಾರ್ಯಕ್ರಮ ಇದುವರೆಗೂ ತೆಗೆದುಕೊಂಡಿಲ್ಲ. ಅದನ್ನು ಇನ್ನು ಎಷ್ಟು ವರ್ಷಗಳಲ್ಲಿ ಅವುಗಳನ್ನು ತೆಗೆದುಕೊಂಡು ರಿಪೇರಿ ಮಾಡಿಸುತ್ತೀರಿ ?